## ವಿಶಿಷ್ಟ ಧಾರಾವಾಹಿ

'ಕಲರ್ಸ್ ಸೂಪರ್' ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಹಿರಿಯ, ಜನಪ್ರಿಯ ನಿರ್ದೇಶಕ ಟಿ.ಎನ್. ಸೀತಾರಾಂ ಅವರ ಧಾರಾವಾಹಿ 'ಮಗಳು ಜಾನಕಿ' ಪ್ರೇಕ್ಷಕರ ಗಮನ ವಿಶೇಷವಾಗಿ ಸೆಳೆಯುತ್ತಿದೆ. ಹಳ್ಳಿಗಳಲ್ಲೂ ಈ ಧಾರಾವಾಹಿಯ ಪ್ರೇಕ್ಷಕ ಗಣ ದಿನೇ ದಿನೇ ಹೆಚ್ಚುತ್ತಿದೆ. ರಾಜಕಾರಣಿ, ಮಗಳು, ವಕೀಲ, ನಿರುದ್ಯೋಗಿ... ಇವರೆಲ್ಲ ತಮ್ಮ ತಮ್ಮ ಪಾತ್ರಗಳಲ್ಲಿ ಮುಳುಗಿ ನಟಿಸುತ್ತಿದ್ದಾರೆ. ಈ ಧಾರಾವಾಹಿಯಿಂದ ಪ್ರೇಕ್ಷಕರಿಗೆ ಪ್ರಸ್ತುತ ಸಮಾಜದ ಯುವಕರ ಸಮಸ್ಯೆಯ ಜತೆಗೆ ಕೆಲವು ರಾಜಕಾರಣಿಗಳ ದುರ್ವರ್ತನೆಯೂ ತಿಳಿಯುತ್ತದೆ. ಎಲ್ಲರೂ ನೋಡುವಂತಹ ವಿಶಿಷ್ಟ ಧಾರಾವಾಹಿ.

–ನಾರಾಯಣ ಯಾಜಿ, ಶಿರಾಲಿ

## ವೀರಪ್ಪನ್ 'ಮಾಟ'ಕ್ಕೆ ಬಲಿ?

ಇತ್ತೀಚೆಗೆ ಪಬ್ಲಿಕ್ ಮೂವೀಯ 'ಸಂಖ್ಯಾಫಲ' ಕಾರ್ಯಕ್ರಮದಲ್ಲಿ ಜ್ಯೋತಿಷಿಯೊಬ್ಬರು 'ವೀರಪ್ಪನ್‌ನನ್ನು ಪೊಲೀಸರು ಕೊಂದಿಲ್ಲ. ಅವನು ಮಂತ್ರಮಾಟದಿಂದ ಸತ್ತದ್ದು. ಅದಕ್ಕೆ ನನ್ನ ಬಳಿ ದಾಖಲೆಯಿದೆ' ಎಂದು ಹೇಳಿದರು. ಇದನ್ನು ಕೇಳಿ ನಗಬೇಕೋ ಅಳಬೇಕೋ ಗೊತ್ತಾಗಲಿಲ್ಲ. ಮಾಟದಿಂದ ಕೊಲ್ಲುವುದಾದರೆ ಅವನನ್ನು ಅಷ್ಟು ದಿನ ಸಾಯಿಸದೆ ಬಿಟ್ಟಿದ್ದ್ಯಾಕೆ? ನಮ್ಮ ಶತ್ರು ರಾಷ್ಟ್ರಗಳ ಮುಖ್ಯಸ್ಥರನ್ನು ಮಾಟದಿಂದ ಕೊಲ್ಲಬಹುದಲ್ಲವೇ? ಜ್ಯೋತಿಷಿಗಳು ಶಿಲಾಯುಗಕ್ಕೆ ಕೊಂಡೊಯ್ಯುತ್ತಿದ್ದಾರೆ.

–ರಾಮಕೃಷ್ಣ ರಾವ್, ಮಂಗಳೂರು

## ಮಾನವೀಯ ರಮೇಶ್

ಸುವರ್ಣ ವಾಹಿನಿಯಲ್ಲಿ 'ಕೋಟ್ಯಧಿಪತಿ' ಕಾರ್ಯಕ್ರಮ ತುಂಬಾ ಚೆನ್ನಾಗಿತ್ತು. ಅರವಿಂದ ರಮೇಶ್ ಅವರ ನಿರೂಪಣೆಯ ವೈಖರಿ, ಅವರ ವಾಕ್ ಚಾತುರ್ಯ ಮೆಚ್ಚುವಂತಹದ್ದು. ಸ್ಪಷ್ಟ ಕನ್ನಡದಲ್ಲಿ ಅಂತಃಕರಣದ ಮಾತುಗಳು ಮಾನವೀಯತೆಯನ್ನು ಮೆರೆದು ಎಲ್ಲರ ಮನಸ್ಸು ತಟ್ಟುವುದರಲ್ಲಿ ಸಂಶಯವಿಲ್ಲ. ಇತ್ತೀಚಿನ ಕಂತಿನಲ್ಲಿ 'ಹಾಟ್ ಸೀಟ್'ನಲ್ಲಿ ಕುಳಿತ ಅಭ್ಯರ್ಥಿ ವೈಯಕ್ತಿಕ ವಿಷಯ ಹೇಳಿಕೊಂಡು ಕಣ್ಣಲ್ಲಿ ನೀರು ತುಂಬಿಕೊಂಡಾಗ ತಮ್ಮ ಕಿಸೆಯಲ್ಲಿಯ ಕರವಸ್ತ್ರವನ್ನು ನೀಡಿ ಸಂತೈಸಿದ್ದು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ ಎಂದರೆ ತಪ್ಪಾಗಲಾರದು. ದುಡ್ಡು ಗೆಲ್ಲುವ ವಿಷಯದಲ್ಲಿ ಎಚ್ಚರಿಕೆ ನೀಡುತ್ತಲೆ ಅವರನ್ನು ಗೆಲ್ಲಿಸುವ ಪ್ರಯತ್ನ ಮಾಡುತ್ತಾರೆ.

–ಮೇಘನಾ ಜಹಗೀರದಾರ, ಧಾರವಾಡ;
ಶ್ರೀನಾಥ್ ಕೊನೇಟಿ, ಬೆಂಗಳೂರು

ವಾರದ ಪತ್ರ

## ಮಾನಸೋಲ್ಲಾಸ ಇಲ್ಲದ 'ಮಾನಸ...'

ಉದಯದಲ್ಲಿ ಪ್ರಸಾರವಾಗುತ್ತಿರುವ 'ಮಾನಸ ಸರೋವರ' ಹಲವು ವೈಶಿಷ್ಟ್ಯಗಳಿಂದ ವೀಕ್ಷಕರನ್ನು ಸೆರೆ ಹಿಡಿದಿರುವುದು ನಿಜ. ಪುಟ್ಟಣ್ಣನವರ ನಿರ್ದೇಶನದ 'ಮಾನಸಸರೋವರ'ದ ಮುಂದುವರಿದ ಭಾಗ ಎನ್ನುವುದರ ಜೊತೆಗೆ ಶ್ರೀನಾಥ್, ರಾಮಕೃಷ್ಣ, ಪದ್ಮಾವಾಸಂತಿಯವರನ್ನು ಕರೆತಂದಿರುವುದು ವಿಶೇಷ. ಶ್ರೀನಾಥ್‌ರವರ ಪ್ರಬುದ್ಧ ಅಭಿನಯ, ಹಳೆಯ ಹಾಡುಗಳು ಧಾರಾವಾಹಿಯ ಪ್ರಮುಖ ಆಕರ್ಷಣೆಗಳಾಗಿದ್ದವು.

ಆದರೆ ಧಾರಾವಾಹಿ ಈಗ ತನ್ನ ಆಕರ್ಷಣೆ ಕಳೆದುಕೊಂಡಿದೆ. ಯಾವ ರೀತಿಯ ಚಿಕಿತ್ಸೆಯಿಂದ ಗುಣಪಡಿಸಲಾಯಿತು ಎಂಬುದು ಸ್ಪಷ್ಟವಾಗಿಲ್ಲ. ಮಾನಸ ಸರೋವರದ ಇಬ್ಬರು ವೈದ್ಯರು ಆಸ್ಪತ್ರೆ ಬಿಟ್ಟು ಆರಾಮವಾಗಿ ಓಡಾಡಿಕೊಂಡಿದ್ದಾರೆ. ಆಸ್ಪತ್ರೆಯ ಗತಿ ಏನು? ಚಿಂತನ್ ಸುನಿಧಿಯರನ್ನು ದೂರ ಮಾಡಲು ವಿಕ್ಕಿ ಬಳಸುವ ತಂತ್ರ ಹಳೆಯದರಲ್ಲಿ ಹಳೆಯದು. ಮನೋವೈಜ್ಞಾನಿಕ ಸಮಸ್ಯೆಯ ಹಿನ್ನೆಲೆಯ ಕಥೆಯೊಂದು ಮಾಮೂಲಿನಂತೆ ಸಾಗುತ್ತಿರುವುದು ಬೇಸರ ತರುತ್ತಿದೆ.

–ಸಿ.ಎನ್. ಮುಕ್ತಾ, ಮೈಸೂರು

## ಚರ್ಚೆಯಲ್ಲಿ ಹೊಸ ವಿಚಾರ ಮಿನುಗಲಿ

ಕನ್ನಡದ ಸುದ್ದಿವಾಹಿನಿಗಳಲ್ಲಿ ದಿನಾ ಪ್ರಚಲಿತ ವಿದ್ಯಮಾನಗಳ ಬಗೆಗೆ ಚರ್ಚೆ ನಡೆಯುತ್ತದೆ. ಈ ಚರ್ಚೆ ಕೆಲವು ವೀಕ್ಷಕರನ್ನು ಆಕರ್ಷಿಸುತ್ತಿದ್ದರೂ. ಅವು ತಮ್ಮ ಮೊದಲಿನ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಿವೆ. ಇದಕ್ಕೆ ಮುಖ್ಯ ಕಾರಣ, ಚರ್ಚೆಯಲ್ಲಿ ಅವೇ ಮುಖಗಳು, ಅವೇ ವಿಚಾರಧಾರೆಗಳು, ಅವೇ ವಾದದಿಂದ ವೀಕ್ಷಕರು ಆಸಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಭಾಗವಹಿಸಿದವರ ಮುಖವನ್ನು ನೋಡಿದ ತಕ್ಷಣ, ಈ ಮಹನೀಯರು ಕೊರೆಯಬಹುದಾದುದನ್ನು ಊಹಿಸಿ ವೀಕ್ಷಕರು ಚಾನೆಲ್ ಬದಲಿಸುತ್ತಾರೆ. ಚರ್ಚೆ ಅರ್ಥಪೂರ್ಣವಾಗಿರಲು, ರಾಜ್ಯದ ವಿವಿಧ ಸ್ಥಳಗಳಿಂದ, ಸಮಾಜದ ವಿವಿಧ ರಂಗದಲ್ಲಿ ನಿಷ್ಣಾತರಾದವರನ್ನು, ಹೊಸ ವಿಚಾರಧಾರೆಯವರನ್ನು ಚರ್ಚೆಗೆ ಆಮಂತ್ರಿಸಬೇಕು. ಹಾಗೆಯೇ ನಿರೂಪಕರೂ ಬದಲಾಗುತ್ತಿರಬೇಕು. ವೀಕ್ಷಕರು ಒಂದೇ ಮುಖವನ್ನು ನೋಡಲು ಇಚ್ಛೆಪಡುವುದಿಲ್ಲ.

–ರಮಾನಂದ ಶರ್ಮಾ, ಬೆಂಗಳೂರು

## ಹೆದರಿಸುವುದೇ ಇವರ ಕೆಲಸವೇ?

ಭೂಮಿಯ ಮೇಲೆ ನೈಸರ್ಗಿಕ ವಿಕೋಪಗಳು ಸಂಭವಿಸುವುದು ಸಾಮಾನ್ಯ ಸಂಗತಿ. ಮಾನವ ತನ್ನ ಹುಟ್ಟಿನಿಂದಲೂ ಈ ಸಮಸ್ಯೆಯನ್ನು ಎದುರಿಸುತ್ತಲೇ ಬಂದಿದ್ದಾನೆ. ಆದರೆ ಸುದ್ದಿ ವಾಹಿನಿಗಳು ಈ ನೈಸರ್ಗಿಕ ವಿಕೋಪಗಳನ್ನೇ ಆಧಾರವಾಗಿಟ್ಟುಕೊಂಡು ವೀಕ್ಷಕರನ್ನು ಹೆದರಿಸುವ ಕೆಲಸ ಮಾಡುತ್ತಿವೆ.

ವಿದೇಶದಲ್ಲಿ ತಯಾರಾದ ವಿಡಿಯೋಗಳನ್ನು ಪ್ರದರ್ಶಿಸಿ 'ಜಲಪ್ರಳಯ ಸಂಭವಿಸುತ್ತದೆ. ಬೆಂಕಿಯ ಮಳೆ ಸುರಿಯುತ್ತದೆ. ಭೂಕಂಪ ಉಂಟಾಗಿ ದೊಡ್ಡ ದೊಡ್ಡ ನಗರಗಳನ್ನು ಭೂಮಿ ಕಬಳಿಸಿ ಬಿಡುತ್ತದೆ' ಎಂದೆಲ್ಲಾ ಹೆದರಿಸುತ್ತಾರೆ. ಜನರಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿ ಅವರ ಆತ್ಮಸ್ಥೈರ್ಯವನ್ನು ಹೆಚ್ಚಿಸಬೇಕಾದುದು ಮಾಧ್ಯಮಗಳ ಕರ್ತವ್ಯ. ಆದರೆ ಮೂಢನಂಬಿಕೆಯನ್ನು ಬೆಳೆಸಿ ಆತ್ಮಸ್ಥೈರ್ಯವನ್ನು ಕುಗ್ಗಿಸುವ ಕಾರ್ಯವನ್ನು ಮಾಡುತ್ತಿವೆ. ಕೇವಲ ತಮ್ಮ ಟಿ.ಆರ್.ಪಿ. ಹೆಚ್ಚಿಸಿಕೊಳ್ಳುವುದಕ್ಕಾಗಿ ಈ ರೀತಿಯ ಗಿಮಿಕ್‌ಗಳನ್ನು ಮಾಡುವುದು ಸರಿಯೇ?

–ಮುರಲೀಧರ ಕುಲಕರ್ಣಿ, ಬೀದರ್

## ಮನಕ್ಕೆ ಹಿಡಿಸಿದ 'ಅಣ್ಣ ತಂಗಿ'

ಉದಯ ಮೂವೀಸ್‌ನಲ್ಲಿ ಪ್ರಸಾರವಾದ ಶಿವರಾಜ್‌ಕುಮಾರ್– ರಾಧಿಕಾರ 'ಅಣ್ಣ ತಂಗಿ' ಸಿನಿಮಾ ನಮ್ಮ ಮನಕ್ಕೆ ಹಾಲು ಸಕ್ಕರೆ ಸವಿದಷ್ಟು ಮುದ ನೀಡಿತು. ಶಿವಣ್ಣ, ರಾಧಿಕಾ ಅವರ ಅಮೋಘ ಅಭಿನಯ, ಹಂಸಲೇಖರ ಹಾಡುಗಳು ಮತ್ತು ಸಾಯಿಪ್ರಕಾಶ್ ನಿರ್ದೇಶನ ಹಿಡಿಸಿತು.

–ಕೆ.ಎಲ್. ಬಾಬು, ಬೀರೂರು

## ಮಾಧ್ಯಮ ತೋರಿಸುವುದೂ ಸುಳ್ಳೇ?

ಹಲವು ವಾಹಿನಿಗಳು ರಾಜಕಾರಣಿಗಳು ಮಾತನಾಡುವ ದೃಶ್ಯಗಳನ್ನು ತೋರಿಸಿವೆ. ವೀಕ್ಷಕರು ನೋಡಿದ್ದಾರೆ. ಕಿವಿಯಾರೆ ಕೇಳಿದ್ದಾರೆ. 'ಆದರೆ ಅದು ಸುಳ್ಳು. ನಾನು ಆ ರೀತಿ ಹೇಳಿಲ್ಲ' ಎಂದು ರಾಜಕಾರಣಿಗಳು ಪ್ರಮಾಣ ಮಾಡಿ ಹೇಳುತ್ತಾರೆ. ಅದನ್ನೂ ವಾಹಿನಿಗಳು ತೋರಿಸಿವೆ.

ದೃಶ್ಯ ಮಾಧ್ಯಮವೂ ಸುಳ್ಳು ತೋರಿಸುತ್ತದೆಯೆ? ಕಣ್ಣಾರೆ ಕಂಡದ್ದು, ಕಿವಿಯಾರೆ ಕೇಳಿದ್ದೂ ಸುಳ್ಳು! ಹಾಗಾದರೆ ಅಕ್ಷರ ಮಾಧ್ಯಮ? 'ಹೌದು' ಎನ್ನುತ್ತಾರೆ ಪಕ್ಷದ ಮುಖಂಡರು. ಇನ್ನೂ ಕೆಲವು ಸಲ ಒಂದು ಘಟನೆ ನಡೆದು ರಾಜ್ಯಾದ್ಯಂತ ಪ್ರಚಾರವಾಗಿರುತ್ತದೆ. ಸಂಬಂಧಪಟ್ಟ ಸಚಿವರನ್ನು ಭೇಟಿಯಾಗಿ ವರದಿಗಾರ ವಿವರ ಕೇಳಿದರೆ 'ಇನ್ನೂ ನನ್ನ ಗಮನಕ್ಕೆ ಬಂದಿಲ್ಲ' ಎನ್ನುತ್ತಾರೆ. ಇವರ ಸುಳ್ಳಿನ ನಡುವೆ ಮಾಧ್ಯಮಗಳು ಪರದಾಡಬೇಕು.

– ಸತ್ಯಬೋಧ, ಬೆಂಗಳೂರು